# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ ಎ<br>Part – IV A | ಬೆಂಗಳೂರು, **ಗುರುವಾರ,** ೧೫, ಸೆಪ್ಟೆಂಬರ್, ೨೦೨೨(**ಭಾದ್ರಪದ,** ೨೪, ಶಕವರ್ಷ, ೧೯೪೪)<br>BENGALURU, THURSDAY, 15, SEPTEMBER, 2022(BHADRAPADA, 24, SHAKAVARSHA, 1944) | ನಂ. ೪೬೦<br>No. 460 |


**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹದಿಮೂರನೇ ಅಧಿವೇಶನ**

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–21)**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ನ್ನು (2020ರ ಕರ್ನಾಟಕ ಅಧಿನಿಯಮ 53) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 2022ರ ಜೂನ್ 10ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 7ನೇ ಪ್ರಕರಣದ ತಿದ್ದುಪಡಿ.-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 53) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 7ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ಪಾಲಿಕೆಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬೇಕಾದ ಒಟ್ಟು ಸ್ಥಾನಗಳ ಸಂಖ್ಯೆಯ ಮೂರನೇ ಒಂದರಷ್ಟರ ಅಂಥ ಸಂಖ್ಯೆಯ ಸ್ಥಾನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸಲಾಗಿದೆ ಎಂಬುದನ್ನು,"; ಮತ್ತು

(ii) ಪರಂತುಕದಲ್ಲಿ "(2)ನೇ ಉಪ-ಪ್ರಕರಣದ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಮತ್ತು ಈ ಉಪ-ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಸಂಖ್ಯೆಯು ಪಾಲಿಕೆಯಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರದಂತೆ ನಿರ್ಧರಿಸತಕ್ಕದ್ದು." ಎಂಬ ಪದಗಳು, ಅಂಕಿ ಮತ್ತು ಆವರಣ ಚಿಹ್ನೆಗಳ ಬದಲಿಗೆ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಹಾಗೂ ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಸಂಖ್ಯೆಯು ಪಾಲಿಕೆಯಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆಯ ಶೇಕಡ ಐವತ್ತರಷ್ಟನ್ನು ಮೀರದಂತೆ ನಿರ್ಧರಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 8ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 8ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿನ ಒಂದನೇ ಪರಂತುಕದಲ್ಲಿ, "(3)ನೇ ಉಪಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿರಿಸಿದಂತೆ ಇರತಕ್ಕದ್ದು ಹಾಗೂ ಈ ಉಪ ಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳು ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ." ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ "(2) ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಿರಿಸಿದ ಪಾಲಿಕೆಯಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆಯು ಶೇಕಡಾ ಐವತ್ತರಷ್ಟನ್ನು ಮೀರತಕ್ಕದ್ದಲ್ಲ." ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

**4. ನಿರಸನ ಮತ್ತು ಉಳಿಸುವಿಕೆಗಳು.-** (1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 05) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್‌ಎಲ್‌ಪಿ ಸಂ.15181-15183/2020ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಲು ನೀಡಿದ ನಿರ್ದೇಶನವನ್ನು ಪಾಲಿಸಲು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉಪಬಂಧಿಸಲಾದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರೆ ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಶೇಕಡಾ ಐವತ್ತರಷ್ಟನ್ನು ಮೀರದ ಸ್ಥಾನಗಳ ಮೀಸಲಾತಿಯನ್ನು ಉಪಬಂಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 53) 7ನೇ ಮತ್ತು 8ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 05) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್‌ಎಲ್‌ಪಿ ಸಂ.15181-15183/2020ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಲು ನೀಡಿದ ನಿರ್ದೇಶನವನ್ನು ಪಾಲಿಸಲು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉಪಬಂಧಿಸಲಾದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಇತರೆ ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಶೇಕಡಾ ಐವತ್ತರಷ್ಟನ್ನು ಮೀರದ ಸ್ಥಾನಗಳ ಮೀಸಲಾತಿಯನ್ನು ಉಪಬಂಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 53) 7ನೇ ಮತ್ತು 8ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 05) ಪ್ರಖ್ಯಾಪಿಸಲಾಗಿತ್ತು.

**ಬಸವರಾಜ ಬೊಮ್ಮಾಯಿ**
ಮುಖ್ಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 53) ಉದ್ಧೃತ ಭಾಗ

**XX XX XX**

**7. ವಾರ್ಡುಗಳ ಗಡಿ ಗುರುತಿಸುವಿಕೆ.-** (1) ಕೌನ್ಸಿಲರ್‌ಗಳ ಚುನಾವಣೆ ಉದ್ದೇಶಗಳಿಗಾಗಿ ಪ್ರತಿಯೊಂದು ವಾರ್ಡುಗಳ ಜನಸಂಖ್ಯೆಯು ಪ್ರಾಯೋಗಿಕವಾಗುವುಷ್ಟರ ಮಟ್ಟಿಗೆ ಬೆಂಗಳೂರಿನಲ್ಲಿ ಎಲ್ಲಾ ಕಡೆಯು ಸಮಾನವಾಗಿರುವಂತೆ ಅಂಥ ವಿಧಾನದಲ್ಲಿ ಬೆಂಗಳೂರನ್ನು ವಾರ್ಡುಗಳಿಗಾಗಿ ವಿಂಗಡಿಸತಕ್ಕದ್ದು.

(ಎ) ಪ್ರತಿಯೊಂದು ವಾರ್ಡನ ಜನಸಂಖ್ಯೆಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಬೆಂಗಳೂರಿನುದ್ದಕ್ಕೂ ಒಂದೇ ಆಗಿರತಕ್ಕದ್ದು;

(ಬಿ) ವಿಧಾನಸಭೆಯ ಸದಸ್ಯರ ಚುನಾವಣಾ ಕ್ಷೇತ್ರದ ವ್ಯಾಪ್ತಿಯೊಳಗೇ ವಾರ್ಡ್‌ಗಳನ್ನು ವಿಭಾಗಿಸತಕ್ಕದ್ದು ಮತ್ತು ಯಾವುದೇ ವಾರ್ಡ್‌ಗಳು ಇತರ ಚುನಾವಣಾ ಕ್ಷೇತ್ರಗಳಿಗೆ ವಿಸ್ತರಿಸತಕ್ಕದ್ದಲ್ಲ.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ ನಗರದ ಜನಸಂಖ್ಯೆ ಎಂದರೆ, ಪ್ರಕಟಿಸಿದ ಹಿಂದಿನ ಜನಗಣತಿಯ ಮೂಲಕ ಪ್ರಕಟಿಸಿದ ಸಮಂಜಸ ಅಂಕಿಅಂಶ.

(2)ಸರ್ಕಾರವು ವಾರ್ಡ್‌ಗಳ ಕ್ಷೇತ್ರ ವಿಂಗಡನೆ ವಿಧಾನ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ನಿಯಮಿಸಬಹುದಾದಂಥ ವ್ಯಕ್ತಿಗಳನ್ನೊಳಗೊಂಡ ಗಡಿ ಗುರುತಿಸುವಿಕೆ ಆಯೋಗವನ್ನು ರಚಿಸತಕ್ಕದ್ದು:

(3) ರಾಜ್ಯ ಸರ್ಕಾರವು ಆದೇಶದ ಮೂಲಕ,-

(ಎ)ಚುನಾವಣೆಗಳ ಉದ್ದೇಶಕ್ಕಾಗಿ ಪಾಲಿಕೆಯ ವಾರ್ಡುಗಳನ್ನು ಎರಡು ನೂರಾ ಇಪ್ಪತ್ತೈದಕ್ಕಿಂತ ಕಡಿಮೆಯಿರದಂತೆ ಆದರೆ ಎರಡು ನೂರಾ ಐವತ್ತು ವಾರ್ಡ್‌ಗಳಿಗಿಂತ ಹೆಚ್ಚಿರದಂತೆ ವಿಭಾಗಿಸಲಾಗಿದೆಯೇ ಎನ್ನುವುದನ್ನು;

(ಬಿ) ಪ್ರತಿಯೊಂದು ವಾರ್ಡಿನ ವ್ಯಾಪ್ತಿಯನ್ನು;

(ಸಿ) ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಪಾಲಿಕೆಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು

ಸಂಖ್ಯೆಯಲ್ಲಿ ನಗರದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸಲಾಗಿದೆ ಎಂಬುದನ್ನು,

- ನಿರ್ಧರಿಸತಕ್ಕದ್ದು.

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, (2)ನೇ ಉಪ-ಪ್ರಕರಣದ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗಾಗಿ ಮತ್ತು ಈ ಉಪ-ಪ್ರಕರಣದಡಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಮೀಸಲಿರಿಸಿದ ಒಟ್ಟು ಸ್ಥಾನಗಳ ಸಂಖ್ಯೆಯು ಪಾಲಿಕೆಯಲ್ಲಿನ ಒಟ್ಟು ಸ್ಥಾನಗಳ ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರದಂತೆ ನಿರ್ಧರಿಸತಕ್ಕದ್ದು.

(4) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕಾಗಿ ಮೀಸಲಿರಿಸಿದ ಸೀಟುಗಳ ಮತ್ತು ಪಾಲಿಕೆಯಲ್ಲಿ ನೇರವಾಗಿ ಚುನಾವಣೆಯ ಮೂಲಕ ಭರ್ತಿಮಾಡಬೇಕಾದ ಮೀಸಲಿರಿಸಿದ ಸೀಟುಗಳ ಪೈಕಿ ಶೇಕಡಾ 50ರಷ್ಟನ್ನು ಮೀರದ ಸೀಟುಗಳನ್ನು ಮಹಿಳೆಯರಿಗೆ ಮೀಸಲಿರಿಸತಕ್ಕದ್ದು:

ಪರಂತು, (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ ಮೀಸಲಿರಿಸಿದ ಸೀಟುಗಳನ್ನು ನಗರದ ಬೇರೆ ಬೇರೆ ವಾರ್ಡ್ ಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

(5) ಆ ಪಾಲಿಕೆಯ ಸಾರ್ವತ್ರಿಕ ಚುನಾವಣೆಯ ಉದ್ದೇಶಕ್ಕಾಗಿ ಹೊರತು ಪಾಲಿಕೆಯ ಸ್ಥಾಪನೆಯ ತರುವಾಯ ಮೀಸಲಾತಿಯ ಉದ್ದೇಶಕ್ಕಾಗಿ ವಾರ್ಡುಗಳ ಗಡಿ ಗುರುತಿಸುವಿಕೆ ಅಥವಾ ವಾರ್ಡುಗಳ ಬದಲಾವಣೆಯನ್ನು ಮಾಡುವಂತಿಲ್ಲ ಹಾಗೂ ಅಂಥ ವಾರ್ಡುಗಳ ಗಡಿ ಗುರುತಿಸುವಿಕೆ ಅಥವಾ ವಾರ್ಡುಗಳ ಬದಲಾವಣೆಯು ಅಸ್ತಿತ್ವದಲ್ಲಿರುವ ಪಾಲಿಕೆಗೆ ಯಾವುದೇ ರೀತಿಯಲ್ಲಿ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**8. ಪಾಲಿಕೆಯ ರಚನೆ.-** (1) ಪಾಲಿಕೆಯು ಈ ಮುಂದಿನವರನ್ನು ಒಳಗೊಳ್ಳತಕ್ಕದ್ದು,-

(ಎ) 7ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ನಿರ್ಧರಿಸಬಹುದಾದ ಅಂಥ ಸಂಖ್ಯೆಯ ಚುನಾಯಿತ ಸದಸ್ಯರನ್ನು ಪಾಲಿಕೆಯು ಹೊಂದಿರತಕ್ಕದ್ದು.

(ಬಿ) ಸರ್ಕಾರವು, ನಗರದ ನಿವಾಸಿಗಳಿಂದ ಅಂಥ ಸದಸ್ಯರುಗಳನ್ನು ನಾಮ ನಿರ್ದೇಶಿಸತಕ್ಕದ್ದು ಹಾಗೂ ನಾಮ ನಿರ್ದೇಶಿತ ಸದಸ್ಯರು ಕೌನ್ಸಿಲರುಗಳ ಶೇಕಡಾ ಹತ್ತರಷ್ಟನ್ನು ಮೀರತಕ್ಕದ್ದಲ್ಲ.-

(i) ಪೌರಾಡಳಿತ ಅಥವಾ ಆರೋಗ್ಯ, ಪಟ್ಟಣ ಯೋಜನೆ ಅಥವಾ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನ ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳು; ಅಥವಾ

(ii) ಸಮಾಜ ಸೇವಕರು:

ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು ಪಾಲಿಕೆಯ ಸಭೆಗಳಲ್ಲಿ ಮತದಾನದ ಹಕ್ಕನ್ನು ಹೊಂದಿತಕ್ಕದ್ದಲ್ಲ.

(ಸಿ) ಪಾಲಿಕೆಯ ಪ್ರದೇಶದೊಳಗಿನ ಚುನಾವಣಾ ಕ್ಷೇತ್ರಗಳ ಸಂಸದರಾದ ಸದಸ್ಯರು ಮತ್ತು ಪಾಲಿಕೆಯಲ್ಲಿ ಮತದಾರರಾಗಿ ನೊಂದಣಿಯಾದ ರಾಜ್ಯಗಳ ಪರಿಷತ್ತಿನ ಸದಸ್ಯರು.

(ಡಿ) ಪಾಲಿಕೆಯ ಪ್ರದೇಶದೊಳಗಿನ ಕ್ಷೇತ್ರಗಳ ರಾಜ್ಯ ವಿಧಾನಸಭೆ ಸದಸ್ಯರನ್ನು ಮತ್ತು ಪಾಲಿಕೆಯ ಮತದಾರರಾಗಿ ನೋಂದಾಯಿಸಿದ ವಿಧಾನಪರಿಷತ್ತಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು:

(2) ಪಾಲಿಕೆಯ ಸೀಟುಗಳನ್ನು-

(ಎ) ಅನುಸೂಚಿತ ಜಾತಿಗಳಿಗೆ; ಮತ್ತು

(ಬಿ) ಅನುಸೂಚಿತ ಪಂಗಡಗಳಿಗೆ,

-ಮೀಸಲಿರಿಸತಕ್ಕದ್ದು.

ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡದವರಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯು, ಪಾಲಿಕೆಯಲ್ಲಿ ನೇರ ಚುನಾವಣೆ ಮೂಲಕ ತುಂಬಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ನಗರದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಇರುವ ಪ್ರಮಾಣಕ್ಕೆ ಅನುಸಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸತಕ್ಕದ್ದು.

(3) ನೇರ ಚುನಾವಣೆಯ ಮೂಲಕ ತುಂಬಬೇಕಾದ ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಹತ್ತಿರತ್ತಿರ ಮೂರನೇ ಒಂದರಷ್ಟನ್ನು ಅಂಥ ಸಂಖ್ಯೆಯ ಸದಸ್ಯರನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

ಪರಂತು ಈ ಉಪ ಪ್ರಕರಣದ ಅಡಿಯಲ್ಲಿ ಹಿಂದುಳಿದ ವರ್ಗಗಳಿಗೆ ಹಾಗೆ ಮೀಸಲಿರಿಸಿದ ಸೀಟುಗಳ ಸಂಖ್ಯೆಯು, (3)ನೇ ಉಪ ಪ್ರಕರಣದ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿರಿಸಿದಂತೆ ಇರತಕ್ಕದ್ದು ಹಾಗೂ ಈ ಉಪ ಪ್ರಕರಣದ ಅಡಿಯಲ್ಲಿ ಹಿಂದುಳಿಗೆ ವರ್ಗಗಳು ಪಾಲಿಕೆಯ ಸೀಟುಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.

ಮತ್ತು ಪರಂತು, ಈ ಪ್ರಕರಣದಡಿಯಲ್ಲಿ ಮೀಸಲಿರಿಸಿದ ಸೀಟುಗಳಲ್ಲಿ, ಅಂತಹ ಸೀಟುಗಳ ಒಟ್ಟು ಸಂಖ್ಯೆಯ ಶೇಕಡಾ 80 ನ್ನು 'ಎ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಸೀಟುಗಳ ಶೇಕಡಾ 20ರಷ್ಟನ್ನು 'ಬಿ' ಪ್ರವರ್ಗದಡಿಯಲ್ಲಿ ಮೀಸಲಿರಿಸತಕ್ಕದ್ದು.

ಅಲ್ಲದೆ ಪರಂತು, 'ಎ' ಪ್ರವರ್ಗದಡಿಯಲ್ಲಿ ಬರುವ ಯಾವೊಬ್ಬ ವ್ಯಕ್ತಿಯು ಲಭ್ಯವಾಗದಿದ್ದಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸೀಟುಗಳನ್ನು ಕೂಡ 'ಬಿ' ಪ್ರವರ್ಗದಡಿಯಲ್ಲಿ ಬರುವ ವ್ಯಕ್ತಿಗಳಿಂದ ಭರ್ತಿಮಾಡತಕ್ಕದ್ದು. ಹಾಗೆಯೇ ಇದು ವಿಪರ್ಯಯವಾಗತಕ್ಕದ್ದು.

(4) ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ವರ್ಗಕ್ಕಾಗಿ ಮೀಸಲಿರಿಸಿದ ಸೀಟುಗಳ ಶೇಕಡಾ ಐವತ್ತರಷ್ಟನ್ನು ಮೀರದಿರುವಂತಿಲ್ಲ ಹಾಗೂ ಪಾಲಿಕೆಯಲ್ಲಿ ನೇರ ಚುನಾವಣೆಯ ಮೂಲಕ ತುಂಬಬೇಕಾದ ಮೀಸಲಿಲ್ಲದಿರುವ ಸೀಟುಗಳನ್ನು ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು.

ಪರಂತು, ಈ ಉಪ-ಪ್ರಕರಣದಲ್ಲಿ ಮೀಸಲಿರಿಸಿದ ಸೀಟುಗಳನ್ನು ನಗರದ ಬೇರೆಬೇರೆ ವಾರ್ಡ್‌ಗಳಿಗೆ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

(5) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಕೌನ್ಸಿಲರುಗಳನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಚುನಾಯಿಸತಕ್ಕದ್ದು.

(6) (2), (3) ಮತ್ತು (4)ನೇ ಉಪ ಪ್ರಕರಣಗಳಲ್ಲಿ ಇರುವುದಾವುದೂ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು, ಹಿಂದುಳಿದ ವರ್ಗಗಳು ಅಥವಾ ಮಹಿಳಾ ಸದಸ್ಯರು ಮೀಸಲಿಲ್ಲದ ಸೀಟುಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ನಿರ್ಬಂಧಿಸತಕ್ಕದ್ದಲ್ಲ.

(7) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಟ್ಟಾರೆ ಮೂರನೇ ಎರಡರಷ್ಟು ಸಂಖ್ಯೆಯ ಕೌನ್ಸಿಲರುಗಳನ್ನು ಚುನಾಯಿಸಬೇಕಾದ ಅಗತ್ಯವಿರುವಾಗ ಚುನಾಯಿತರಾಗಿದ್ದಲ್ಲಿ ಪಾಲಿಕೆಯು ಅಧನಿಯಮದ ಅಡಿಯಲ್ಲಿ ಯುಕ್ತವಾಗಿ ರಚನೆಯಾಗಿರುವುದಾಗಿ ಭಾವಿಸತಕ್ಕದ್ದು.

**XX XX XX**

**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**THIRTEENTH SESSION**

# THE BRUHAT BENGALURU MAHANAGARA PALIKE (AMENDMENT) BILL, 2022

**(LA Bill No. 21 of 2022)**

A Bill further to amend the Bruhat Bengaluru Mahanagara Palike Act, 2020.

Whereas it is expedient to amend the Bruhat Bengaluru Mahanagara Palike Act, 2020 (Karnataka Act 53 of 2020) for the purposes hereinafter appearing;

Be it enacted by the Karnataka State Legislature in the seventy third year of the Republic of India as follows:-

**1. Short title and commencement.-** (1) This Act may be called the Bruhat Bengaluru Mahanagara Palike (Amendment) Act, 2022.

(2) It shall be deemed to have come into force with effect from the $10^{th}$ day of June, 2022.

**2. Amendment of section 7.-** In the Bruhat Bengaluru Mahanagara Palike Act, 2020 (Karnataka Act 53 of 2020) (hereinafter referred to as the Principal Act) in section 7, in sub section (3),-

(i) after clause (c), the following shall be inserted, namely:-

"(d) Such number of seats which shall as nearly as may be, one third of the total number of seats to be filled by direct election in the Corporation shall be reserved for persons belonging to the Backward Classes."; and

(ii) in the proviso, for the words, figure and brackets "under sub-section (2) and the Backward Classes under this sub-section shall not exceed one third of the total number of seats in the Corporation", the words "and the Backward Classes under this sub-section shall not exceed fifty percent of the total number of seats in the Corporation" shall be substituted.

**3. Amendment of section 8.-** In the Principal Act, in section 8, in sub-section (3), in the first proviso, for the words, figure and brackets "under sub-section (3) and the Backward Classes under this sub-section shall not exceed one third of the total

number of seats in the Corporation", the words, figures and brackets "and the Backward Classes under sub-sections (2) and (3) shall not exceed fifty percent of the total number of seats in the Corporation" shall be substituted.

**4. Repeal and savings.-** (1) The Bruhat Bengaluru Mahanagara Palike (Amendment) Ordinance, 2022 (Karnataka Ordinance 05 of 2022) is hereby repealed.

(2) Notwithstanding such repeal, anything done or any action taken under the Principal Act, as amended by the said Ordinance, shall be deemed to have been done or taken under the Principal Act, as amended by this Act.

**STATEMENT OF OBJECTS AND REASONS**

It is considered necessary to amend the sections 7 and 8 of the Bruhat Bengaluru Mahanagara Palike Act, 2020 (Karnataka Act 53 of 2020) to provide reservation of not more than fifty percent of seats to the Scheduled Castes, Scheduled Tribes, Other Backward Classes and Women in the Bruhat Bengaluru Mahanagara Palike as provided in the Urban Local Bodies and to follow the direction of the Hon'ble Supreme Court given in SLP No. 15181-15183/2020 to conduct of the Election to the Bruhat Bengaluru Mahanagara Palike.

As the matter was urgent and both Houses of the State Legislature were not in session, the Bruhat Bengaluru Mahanagara Palike (Amendment) Ordinance, 2022 (Karnataka Ordinance 05 of 2022) was promulgated to achieve the above object.

This Bill seeks to replace the above ordinance.

Hence, the Bill.

**FINANCIAL MEMORANDUM**

There is no extra expenditure involved in the proposed Legislative Measure.

**EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.**

It is considered necessary to amend the section 7 and 8 of the Bruhat Bengaluru Mahanagara Palike Act, 2020 (Karnataka Act 53 of 2020) to provide reservation of not more than fifty percent of seats to the Scheduled Castes, Scheduled Tribes, Other Backward Classes and Women in the Bruhat Bengaluru Mahanagara Palike as provided in the Urban Local Bodies and to follow the direction of the Hon'ble Supreme Court given in SLP No. 15181-15183/2020 to conduct of the Election to the Bruhat Bengaluru Mahanagara Palike.

As the matter was urgent and both Houses of the State Legislature were not in session, the Bruhat Bengaluru Mahanagara Palike (Amendment) Ordinance, 2022 (Karnataka Ordinance 05 of 2022) was promulgated to achieve the above object.

**BASAVARAJA BOMMAI**
Chief Minister

**M.K. VISHALAKSHI**
Secretary
Karnataka Legislative Assembly

**ANNEXURE**

**THE EXTRACT FROM THE BRUHAT BENGALURU MAHANAGARA PALIKE ACT, 2020 (KARNATAKA ACT NO. 53 OF 2020)**

**X X XX XX**

**7. Delimitation of Wards.-** (1)For the purposes of election of councilors, Bengaluru shall be divided into wards on the recommendation of the delimitation commission in such manner that,-

(a) the population of each of the wards shall, as far as practicable, be the same throughout Bengaluru.;

(b) Wards shall be divided within the constituency of a member of legislative assembly and no wards shall be spread over to constituencies. **Explanation:-** For the purpose of this section population means the population of the city ascertained by preceding census of which relevant figures have been published.

(2) The Government shall constitute a delimitation commission consisting of such number of persons as may be prescribed to recommend to the Government regarding the manner of division of wards.

(3) The Government shall by order determine,-

(a) the wards into which the Corporation shall, for the purpose of its elections, be divided in to not less than two hundred and twenty five but not more than two hundred and fifty wards;

(b) the extent of each ward; and

(c) the number of seats so reserved for Scheduled Castes and Scheduled Tribes shall bear as nearly as may be, the same proportion to the total number of seats to be filled by direct election in the corporation as the population of the Scheduled Castes in the city or of the Scheduled Tribes in the city bears to the total population of the city:

Provided that the number of seats so reserved for the Backward Classes under this subsection shall be so determined, that the total number of seats reserved for the Scheduled Castes and Schedule Tribes under sub-section(2) and the Backward Classes under this subsection shall not exceed one third of the total number of seats in the Corporation.

(4) Not more than fifty percent of the seats reserved for each category of persons belonging to Scheduled Castes, Scheduled Tribes and Backward Classes and those of the non-reserved seats to be filled by direct election in a corporation shall be reserved for women:

Provided that, the seats reserved in sub-sections (3) and (4) shall be allotted by rotation to different wards in the city.

(5) No delimitation of wards or change of wards for the purpose of reservation shall be made in the Corporation after its constitution except for the purpose of general election to that Corporation and no such delimitation or change of wards shall, in any manner, affect the existing Corporation.

**8. Constitution of the Corporation.-**(1) The Corporation shall consist of,-

(a) such number of elected Councillors representing each ward determined by the Government under sub-section (3) of section 7.

(b) the Government shall nominate such members from the residents of the city and such members shall not exceed ten percent of the Councillors:-

(i) who are persons having special knowledge and experience in municipal administration or matters relating to health, town planning or education; or

(ii) who are social workers; Provided that, the persons referred to in clause (b) shall not have right to vote in the meetings of the Corporation.

(c) The Members of the House of people whose constituencies are within the area of the Corporation and the Members of the Council of States who are registered as voters in the Corporation.

(d) The Members of Legislative Assembly whose constituencies are within the area of the Corporation and the Members of Legislative Council who are registered as voters in the Corporation.

(2) Seats shall be reserved in a corporation,-

(a) for the Scheduled Castes; and

(b) for the Scheduled Tribes: and the number of seats so reserved shall bear as nearly as may be, the same proportion to the total number of seats to be filled by direct election in the corporation as the population of the Scheduled Castes in the city or of the Scheduled Tribes in the city bears to the total population of the city.

(3) Such number of seats which shall as nearly as may be, one third of the total number of seats to be filled by direct election in a corporation shall be reserved for persons belonging to the Backward Classes:

Provided that, the number of seats so reserved for the Backward Classes under this sub-section shall be so determined, that the total number of seats reserved for the Scheduled Castes and Schedule Tribes under sub-section (3) and

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



the backward classes under this subsection shall not exceed one third of the total number of seats in the Corporation.

Provided further that, out of the seats reserved under this sub-section, eighty percent of the total number of such seats shall be reserved for the persons falling under category "A" and the remaining twenty percent of the seats shall be reserved for the persons falling under category "B":

Provided also that, if no person falling under category "A" is available, the seats reserved for that category shall also be filled by the persons falling under category "B" and vice-versa:

(4) Not more than fifty percent of the seats reserved for each category of persons belonging to the Scheduled Castes, the Scheduled Tribes and backward classes and those of the non-reserved seats to be filled by direct election in a corporation shall be reserved for women:

Provided that, the seats reserved in this sub-section shall be allotted by rotation to different wards in a city.

(5) The Councilors referred to in of sub-section (1) shall be elected in the manner provided in this Act.

(6) Nothing contained in sub-sections (2), (3) and (4) shall be deemed to prevent the members of the Scheduled Castes, Scheduled Tribes, backward classes or women from standing for election to the non-reserved seats.

(7) Notwithstanding anything contained in this Act, where two thirds of the total number of Councillors required to be elected have been elected, the Corporation shall be deemed to have been duly constituted under this Act.

**X X XX XX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE